| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಕುದುರೆಯನ್ನು ಲವನು 'ಉತ್ತರೀಯದಿಂದ' ಕಟ್ಟಿದನು. | |
| 8. | ಮಾನವನ ಕಾದಾಟಕ್ಕೆ ಕಾರಣ 'ಹಮ್ಮು' | |
| 9. | ಭರತ ಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು 'ವೃಷಭಾಚಲ'ದಲ್ಲಿ ಬರೆಸಲು ಹೋಗುತ್ತಾನೆ. | |
| 10. | ಅಂದವಾದ ಬರವಣಿಗೆಯ 'ಶಿಕ್ಷಣದ ಅವಶ್ಯಕ ಅಂಶ' ಎಂಬುದು ಗಾಂಧಿಯವರ ಅಭಿಪ್ರಾಯ. | |
| 11. | ಮುದ್ದು ಪಾರಿವಾಳಗಳ ಜೋಡಿಯು 'ದಟ್ಟ ಕಾಡಿನಲ್ಲಿದ್ದ ಒಂದು ಮರದ ಪೊಟರೆಯಲ್ಲಿ' ಸಂಸಾರ ಹೂಡಿತ್ತು. | |
| 12. | ಕನ್ನಡನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾಗಿವೆ. | |
| 13. | ಅಂತರ್‌ಜೀವಿಗೆ 'ಇತರರ ಯೋಗಕ್ಷೇಮ ನೋಡಿಕೊಳ್ಳುವುದು' ದೊಡ್ಡ ಸಮಸ್ಯೆಯಾಗಿದೆ. | |
| 14. | ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ ಅರ್ಜುನನಿಗೆ ಗಾಂಡೀವಿ ಎಂದು ಕರೆಯುತ್ತಾರೆ. | |
| 15. | ಜಿ.ಎಸ್. ಶಿವರುದ್ರಪ್ಪ ಅವರ ಪ್ರಕಾರ ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದೊಳು ಬದುಕಬೇಕು. | |
| 16. | ವಿಸ್ತಾರವಾದ ಬಿಳಿಯ ಕೊಳ ಶ್ರವಣ ಬೆಳಗೊಳದ ಚಿಕ್ಕ ಬೆಟ್ಟ ಮತ್ತು ದೊಡ್ಡ ಬೆಟ್ಟಗಳ ನಡುವೆ ಇದೆ. | |
| | **ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $16 \times 2 = 32$ |
| 17. | ಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಶಾಸನವನ್ನು ಹೊರಡಿಸಿ ವೈಷ್ಣವರು ಭೇದಭಾವ ಮಾಡದೆ ಜೈನ ಬಸದಿಗಳ ರಕ್ಷಣೆಗಾಗಿ ಮನೆಗಂದಾಯವನ್ನು ಪ್ರತಿ ವರ್ಷಕ್ಕೆ ಒಂದು ನಾಣ್ಯದಂತೆ ಸಂಗ್ರಹಿಸಿ ಕಾವಲನ್ನು ಗೊತ್ತು ಮಾಡಬೇಕು. ಇಪ್ಪತ್ತು ಆಳುಗಳಿಗೆ ಈ ಹಣದಲ್ಲಿ ಸಂಭಾವನೆ ಕೊಟ್ಟು ಉಳಿದಿರುವ ಹಣದಲ್ಲಿ ಬಸದಿಗಳಿಗೆ ಸುಣ್ಣಬಣ್ಣ ಮಾಡಿ ಜೀರ್ಣೋದ್ಧಾರ ಮಾಡುವುದು. ಇದು ಶಾಶ್ವತವಾಗಿ ಪಾಲನೆಯಾಗಬೇಕು. | |
| 18. | "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ನೆಹರೂ ಅವರು ವಿಶ್ವೇಶ್ವರಯ್ಯನವರ ಬಗ್ಗೆ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಸಂಪ್ರದಾಯ ವಿರೋಧಿ (ನಾಸ್ತಿಕ) ಸಾಗರಕ್ಕೆ ಮಹಾಬಡವಾ ಮುಖದ ಅಗ್ನಿಯಂತೆ, ಶ್ರೀರಂಗದಲ್ಲಿನ ರಂಗನಾಥನ ಪಾದಸೇವೆ ಮಾಡುವ ಪರಮದಾಸನಾಗಿಯೂ, ಶ್ರೀವಿಷ್ಣುವಿನ ನಿವಾಸವಾದ ವೈಕುಂಠಕ್ಕೆ ಹೋಗಲು ಮಾರ್ಗದರ್ಶನ ಮಾಡುವವರಾಗಿಯೂ, ಯತಿಗಳ ರಾಜರಿಗೆ ರಾಜರಾದ ರಾಮಾನುಜರಿಗೆ ಜಯವಾಗಲಿ ಎಂದು ವರ್ಣಿಸಿದ್ದಾರೆ. | |
| 28. | ಭರತ ಖಂಡದಲ್ಲಿ ಹುಲಿಗಳೂ ಧರ್ಮನಿಷ್ಠೆಯುಳ್ಳವು. ಹಿಂದಿನಿಂದ ಆಕ್ರಮಣ ಮಾಡುವುದು ಧರ್ಮವಲ್ಲ. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ ಆತ ಬೆನ್ನು ತಿರುಗಿಸಿರುವಾಗ ಕೊಳ್ಳುವುದು ಧರ್ಮವಲ್ಲವಷ್ಟೇ. | |
| 29. | ಯುಗ ಯುಗಗಳ ಹಣೆ ಬರೆಹವನ್ನು ಒರಸಿ, ಮನ್ವಂತರಗಳ ಭಾಗ್ಯವನ್ನು ತೆರೆಸಿ, ರೆಕ್ಕೆಯನ್ನು ಬೀಸುತ್ತ ಚೇತನಗೊಳಿಸುತ್ತದೆ. ಕಾಲಪಕ್ಷಿಯು ಹೀಗೆ ಹೊಸ ಕಾಲದ ಹಸುಮಕ್ಕಳನ್ನು ಹರಸಿದೆ. | |
| 30. | ನುಡಿದರೆ ಮುತ್ತಿನಹಾರದಂತೆ ಇರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತೆ ಇರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತೆ ಇರಬೇಕು. ನುಡಿದರೆ ಲಿಂಗಮೆಚ್ಚಿ ಅಹುದು, ಅಹುದು ಎನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವನು ಒಲಿಯುವುದಿಲ್ಲ ಎಂದು ಬಸವಣ್ಣನವರು ನುಡಿಯ ಮಹತ್ತ್ವವನ್ನು ಹೇಳಿದ್ದಾರೆ. | |
| 31. | ಮಣ್ಣಿನ ಮಾಲೀಕ ಆದೆನು ಎಂಬ ಮತ್ತಿನಲ್ಲಿ ಮಾನವನು 'ಗಡಿ'ಯನ್ನು ಎಳೆದು ಕೊಂಡನು, ಅಹಂಕಾರದಿಂದ ಬೀಗಲು ಪ್ರಾರಂಭಿಸಿದಾಗ ಗಡಿಯಲ್ಲಿ ಕಾದಾಟಗಳು ಶುರುವಾದವು. ಜೀವಹಾನಿಯೂ ಆಯಿತು. ಗಡಿಯ ಎರಡೂ ಕಡೆ ಶವಗಳು ಬಿದ್ದವು. ವೀರಮರಣ ಹೊಂದಿದವರು ಎರಡೂ ಕಡೆಯವರು. ಸಂಕಟಗೊಂಡವರು ಎರಡೂ ಕಡೆಯವರು. ಈ ವಿಷಯದಲ್ಲಿ ಇಬ್ಬರೂ ಸಮಾನರು. ಹಾಗಾಗಿ ಸಂಕಟಕ್ಕೆ ಗಡಿ ಇಲ್ಲ. | |
| 32. | ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನವನ್ನು ರಚಿಸುವುದರಲ್ಲಿ, ಸರ್ಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ, ಪಾಲು ಇರುವ ಹಕ್ಕಿನಲ್ಲಿ. ಸರ್ಕಾರ ಇರುವುದಾದರೂ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿಕೊಡುವ ಸಲುವಾಗಿ. ಆದ್ದರಿಂದ ಸರ್ಕಾರವು ಯಾರನ್ನು ರಕ್ಷಿಸುವುದು ತನ್ನ ಕರ್ತವ್ಯವಾಗಿದೆಯೋ, ಆ ಜನರಿಂದಲೇ ತನ್ನ ಅಧಿಕಾರವನ್ನೂ, ಬಲವನ್ನೂ ಪಡೆದುಕೊಳ್ಳಬೇಕಾಗುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 46. | (ಸಿ) ವೃದ್ಧಿ | |
| 47. | (ಡಿ) ಉದ್ಧರಣ | |
| 48. | (ಬಿ) ಕಂಗೆಡು | |
| 49. | (ಎ) ಸಂಯೋಜಿತ ವಾಕ್ಯ | |
| 50. | (ಬಿ) ವಿದ್ವಾಂಸ | |
| 51. | (ಎ) ಉಂಟು | |
| 52. | (ಡಿ) ಉರ್ದು | |
| 53. | (ಎ) ದ್ವಿತೀಯಾ | |
| 54. | (ಸಿ) ತಿನ್ನಳು | |
| 55. | (ಎ) ಯತಿ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಅಮರ್ದು | |
| 57. | ಹೊಂದಿಕೊಂಡರೆ | |
| 58. | ದ್ವಿರುಕ್ತಿ | |
| 59. | ತದ್ಧಿತಾಂತಾವ್ಯಯ | |
| | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

60.

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U _ U | _ U U | U _ U | U _ U | U _ U | _ U _ |
| ಕ ರು ಕು | ಳ ನಂ ದ | ನಂ ಪ ವ | ನ ನಂ ದ | ನ ನೆಂ ಬ | ಮ ದಾಂ ಧ | ಗಂ ಧ ಸಿಂ |

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾ ವೃತ್ತದ ಲಕ್ಷ್ಯವಾಗಿದೆ.

***ಅಥವಾ***

| ಸ | ಭ | ರ | ನ | ಮ | ಯ | ಲ.ಗು |
|---|---|---|---|---|---|---|
| U U U | _ U U | _ U _ | U U U | _ _ _ | U _ _ | U _ |
| ಎ ನ ಗಂ | ಪಾಂ ಡು ಗ | ಮಿ ಲ್ಲ ಭೇ | ದ ಮಿ ಳೆ | ಯಂ ಪ ಚ್ಛಾ | ಳ್ವ ಮಾ ಪಾಂ | ಡು ನಂ |

ಇದು ಅಕ್ಷರ ಗಣ ಛಂದಸ್ಸಿನ ಮತ್ತೇಭವಿಕ್ರೀಡಿತ ವೃತ್ತದ ಲಕ್ಷ್ಯವಾಗಿದೆ.

